**SRI BHAGAWAN MAHAVEER JAIN COLLEGE**

Vishweshwarapuram, Bangalore 560004

**Mock Examination Question Paper - January 2019**

| | | | |
|---|---|---|---|
| **Course:** | I PUC | **Subject:** | Kannada |
| **Max. Marks:** | 100 | **Duration:** | 3:15 hrs. |

**ಸೂಚನೆ: ಪ್ರಶ್ನೆ ಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.**

## ಅ–ವಿಭಾಗ

**I ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: 1 x 10 = 10**

1 ನದೀನಂದನ ಯಾರು?
2 ಭವ ಯಾವಾಗ ಕೆಡುವುದು?
3 ಚಲದ ಚಂಡಿ ಯಾರು?
4 ಸಸ್ಯಶ್ಯಾಮಲೆಯ ಕತ್ತು ಹಿಸುಕಿರುವುದು ಏನು?
5 ಕನ್ನಡ ಆಹಾರ ಸಂಸ್ಕೃತಿಯ ಪ್ರಮುಖ ಧಾನ್ಯ ಯಾವುದು?
6 ಅಶೋಕಸ್ತಂಭ ಎಲ್ಲಿದೆ?
7 ಶಕುಂತಲೆಯ ಅಂತಃಪುರದಿಂದ ದುಷ್ಯಂತ ಹೊರ ನಡೆದದ್ದು ಹೇಗೆ?
8 'ಬದುಕಿನ ಬಗ್ಗೆ ಅವನಿಗೆ ಒಂದೂ ತಕರಾರಿಲ್ಲ' ಎಂದು ಪಿಶಾಚಿಯು ಯಾರ ಬಗ್ಗೆ ಹೇಳುತ್ತದೆ?
9 ಸಾವ್ಕಾರ ಚಿನ್ನದ ನಾಣ್ಯಗಳನ್ನು ಕಾಯುವಂತೆ ಯಾರಿಗೆ ಹೇಳಿದನು?
10 ಅಣ್ಣಂದಿರಿಗೆ ಯಾವ ರೋಗ ಹಿಡಿದಿದೆ ಎಂದು ಬೋಳೇಶಂಕರ ಹೇಳುತ್ತಾನೆ?

## ಆ–ವಿಭಾಗ

**II ಅ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 4 = 8**

11 ತಗಹು, ಸೂತಕಗಳು ಯಾವುವು?
12 ಮಾದೇವ ತನ್ನ ಶಿಶುಮಕ್ಕಳಿಗೆ ಏನೇನು ನೀಡಿ ಸಲಹಿದನು?
13 ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು?
14 ತನ್ನನ್ನು ಏಕೆ ಕಿತ್ತುಕೊಳ್ಳಬಾರದೆಂದು ಹೊಟ್ಟೆಯೊಳಗಿನ ಮಗುವು ಹೇಳುತ್ತದೆ?
15 ಇತಿಹಾಸದ ಚಕ್ರ ಹೇಗೆ ಸುತ್ತಬೇಕು?

**ಆ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

16 ವೈದ್ಯಾಧಿಕಾರಿಗೆ ಹುಡುಗ ಹೇಗೆ ಕಂಡನು?
17 ಜೋತಿಷ್ಯದ ಪ್ರಕಾರ ಗ್ರಹಗಳು ಎಷ್ಟು? ಅವುಗಳು ಯಾವುವು?
18 ರಂಗರಾವ್ ಅವರು ತಮ್ಮ ಮಗಳನ್ನು ಯಾರಿಗೆ ಕೊಟ್ಟು ಮದುವೆ ಮಾಡಿಸಿದರು ಮತ್ತು ಮದುವೆ ಪೌರೋಹಿತ್ಯ ಯಾರು ವಹಿಸಿದ್ದರು?
19 ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?

**ಇ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

20 ಸಾಪ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?
21 ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾಪ್ಕಾರಣ್ಣನು ಏನು ಹೇಳುತ್ತಾನೆ?
22 ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23 ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

## ಇ–ವಿಭಾಗ

**III ಅ ಎರಡನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 2 = 6**

24 ಮೆಳೆ ಭಕ್ತನೆ? ಇಟ್ಟಾತ ಗುರುವೆ?
25 ಪವಳದ ಲತೆಗೆ ಕೆಂಪಿಟ್ಟವರು ಯಾರೊ.
26 ನಮಾಜ್ ಎಂದರೆ ಜುಮ್ಮಾ---ಈದ್ ಎಂದರೆ ದೂದ್ ಖುರ್ಮಾ.

**ಆ ಒಂದನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

27 ಅಕ್ಷರಮಳೆ ಧಾರಾಕಾರವಾಗಿ ಸುರಿಯತೊಡಗಿತು.
28 ಜನನಿಯುದರದಿಂ ಬಂದೆನೆಂದು ಜವದೊಳಲ್ಲಿಂತೆರಳಿ

**ಇ ಒಂದನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

29 ಕತೆ ಕೇಳಿದರೆ ಆರೋಗ್ಯಕ್ಕೆ ಒಳ್ಳೇದಂತಲ್ಲ.
30 ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ, ಹಿಂದೆ ಹಿಂದಲ್ಲ.

## ಈ–ವಿಭಾಗ

**IVಅ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 3 = 12**

31 ಅರಸ ಮತ್ತು ಆಳಿನ ಮುಖಾಮುಖಿಯ ಜೊತೆಗೆ ಸರಳ ಭಕ್ತಿಯೇ ಶ್ರೇಷ್ಠ ಎಂಬುದನ್ನು ಕವಿ ಹರಿಹರ ಹೇಗೆ ನಿರೂಪಿಸಿದ್ದಾನೆ?
32 ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?
33 'ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದು' ಹೇಳುವ ಕವಿಯ ಮಾತಿನ ಅರ್ಥವೇನು? ವಿವರಿಸಿ.
34 ಭೂಮಿಯ ಹಸಿರನ್ನು ಉಳಿಸಿ ಜೈವಿಕ ಇಂಧನ ಬಳಸುವ ಕವಿಯ ಆಶಯಗಳನ್ನು ವಿವರಿಸಿ.

**ಆ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

35 ಕಪಿಲವಸ್ತುವಿನ ಉದ್ಯಾನವನದ ಬಗ್ಗೆ ಲೇಖಕರು ನೀಡುವ ವಿವರಗಳನ್ನು ಸಂಗ್ರಹಿಸಿ.
36 ರಂಗರಾವ್ ಅವರ ಸಾಮಾಜಿಕ ಸುಧಾರಣೆಯ ಕೊಡುಗೆಗಳೇನು?
37 ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?

**ಇ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

38 ಒಂದನೇ ಪಿಶಾಚಿಯು ತನ್ನನ್ನು ಹೇಗೆ ಪರಿಚಯಿಸಿಕೊಳ್ಳುತ್ತದೆ ?
39 ಸೈನಿಕರು ಹಾಡಿದ ಸಿಟಿ ಹಾಡಿನ ಸಾರಾಂಶವೇನು?
40 "ಹಸಿರೇ ಉಸಿರು" ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ? ವಿಮರ್ಶಿಸಿ.

## ಉ–ವಿಭಾಗ

**V ಅ ಒಂದು ಪದ್ಯದ ಭಾವಾರ್ಥ ಬರೆಯಿರಿ: 5 x 1 = 5**

41 ಅನೃತಂ ಲೋಭಂ ಭಯಮಂ
ಬಿನುತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

**ಅಥವಾ**

42 ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳೆದು ಪತ್ರದಿಂ ಕೊಡೆವಿಡಿದು
ಸೆರೆಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು.

## ಊ–ವಿಭಾಗ

## ಆ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: **2 x 6 = 12**

| | | | |
|---|---|---|---|
| 43 | **ಪದಗಳ ಅರ್ಥ ಬರೆಯಿರಿ:–** | ವ್ರಜ | ನಖ |
| 44 | **ಬಿಡಿಸಿ ಬರೆಯಿರಿ:–** | ನಿನಗಿನ್ನೆಗಂ | ಬಿದ್ದಳಂಗನೆ |
| 45 | **ತದ್ಭವಗಳನ್ನು ಬರೆಯಿರಿ:–** | ಪ್ರಾಯ | ಧ್ವನಿ |
| 46 | **ಈ ಜೋಡುನುಡಿಗಳಿಂದ ವಾಕ್ಯ ರಚಿಸಿ:–** | ಭಯಭಕ್ತಿ | ಹೊಟ್ಟೆಬಟ್ಟೆ |
| 47 | **ವಿರುದ್ಧ ರೂಪ ಬರೆಯಿರಿ:–** | ಉಚಿತ | ಮಾನವ |
| 48 | **ಸಮಾನಾರ್ಥಗಳನ್ನು ಬರೆಯಿರಿ:–** | ಶರೀರ | ನೃಪ |
| 49 | **ದ್ವಿರುಕ್ತಿಗೆ ಎರಡು ಉದಾ ಕೊಡಿ.** | | |

## ಇ ಒಂದನ್ನು ಕುರಿತು ಪ್ರಬಂಧ ಬರೆಯಿರಿ: **5 x 1 = 5**

50 ಹದಿಹರೆಯ

51 ಚಲನಚಿತ್ರ.

## ಈ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ:– **4 x 1 = 4**

52 ಇತ್ತೀಚಿಗೆ ನಿಮ್ಮ ಕಾಲೇಜಿನಲ್ಲಿ ನಡೆದ 'ಕನ್ನಡ ಹಬ್ಬದ' ಆಚರಣೆಯ ಬಗ್ಗೆ ಪರಊರಿನಲ್ಲಿರುವ ನಿಮ್ಮ ತಾಯಿ–ತಂದೆಗೆ ಪತ್ರ ಬರೆಯಿರಿ.

53 ನಿಮ್ಮ ಬಡಾವಣೆಯ ಕುಡಿಯುವ ನೀರಿನ ಸಮಸ್ಯೆಯನ್ನು ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

## ಉ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ: **4 x 1 = 4**

54 ಬೆಳ್ಳಗಿರುವುದೆಲ್ಲ ಹಾಲಲ್ಲ.

55 ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

*****